**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 886/2021** ಸಿ.ಡಬ್ಲ್ಯೂ -3

ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | : | ಶಿವಾನಂದ |
| ತಂದೆ:ಗಂಡ | : | ನೀಲಕಂಠರಾವ ಪಾಟೀಲ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಅಬಕಾರಿ ನೀರಿಕ್ಷಕರು<br>ಕಲಬುರಗಿ |
| ವಾಸಸ್ಥಳ | : | ಕಲಬುರಗಿ |

ದಿನಾಂಕ:02.07.2024

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ.06.01.2017 ರಿಂದ 24.11.2020 ರ ವರೆಗೆ ಆಳಂದ ಅಬಕಾರಿ ಇಲಾಖೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.18.04.2020 ರಂದು ಆಳಂದ ಕಚೇರಿಯಲ್ಲಿದ್ದಾಗ ಸುಮಾರು 1.00 ಗಂಟೆಗೆ ದೂರವಾಣಿ ಮೂಲಕ ಒಂದು ಖಚಿತ ಬಾತ್ಮಿ ಬಂದ ಮೇರೆಗೆ ಚಾಸಾ-5, 7 ರವರನ್ನು ಕರೆಯಿಸಿ ಪಂಚರನ್ನು ಕರೆಯಿಸಲು ತಿಳಿಸಿದೇನು. ನಂತರ ಪಂಚರು ಕಚೇರಿಗೆ ಬಂದ ಮೇಲೆ ನಮ್ಮ ಪರಿಚಯ ಹಾಗೂ ಸಿಬ್ಬಂದಿಗಳ ಪರಿಚಯ ಮಾಡಿಕೊಂಡ ಪಂಚರ ಹೆಸರು ಕೇಳಲಾಗಿ ಚಾಸಾ-1 ಮತ್ತು 2 ಎಂದು ತಿಳಿಸಿರುತ್ತಾರೆ. ಆರೋಪಿಯು ಅವನ ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಆದ್ದರಿಂದ ನಾವು ಅಲ್ಲಿ ದಾಳಿ ಮಾಡುವದಿದ್ದು ಅದಕ್ಕೆ ನೀವು ಪಂಚರಾಗಿ ಸಹಕರಿಸಲು ಕೇಳಿದಾಗ ಒಪ್ಪಿಕೊಂಡಿದ್ದು, ನಾವು ಮತ್ತು ನಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ನಮ್ಮ ಖಾಸಗಿ ವಾಹನ ಕೆಎ-32/ಡಿ-3308 ರಲ್ಲಿ ಕುಳಿತು ಕಮಸೂರನಾಯಕ ತಾಂಡಾ ಹೋಗಲಾಗಿ ದೂರದಿಂದ ನಮ್ಮ ವಾಹನವನ್ನು ನೋಡಿ ಆರೋಪಿಯ ಮನೆಯಿಂದ ಒಬ್ಬ ವ್ಯಕ್ತಿ ಓಡಿ ಹೋಗಿರುತ್ತಾನೆ. ಅವನನ್ನು ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ನಂತರ ಶೋಧನಾ ಪತ್ರ ತಯಾರಿಸಿ ಪಂಚರ ಸಮಕ್ಷಮ ಮನೆಯನ್ನು ಶೋಧನೆ ಮಾಡಲು ಪ್ರಾರಂಭಿಸಿದೇವು ಆಗ ಸಮಯ 1.50 ಗಂಟೆ ಆಗಿತ್ತು . ಮನೆಯ ಮೂಲೆಯಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಚೀಲ ಇದ್ದು ಅದನ್ನು ತೆಗೆದು ನೋಡಲಾಗಿ ಆ ಚೀಲದಲ್ಲಿ ಸೇಂದಿ ತುಂಬಿದ ಪ್ಲಾಸ್ಟಿಕ ಪೌಚಗಳು ಇದ್ದು, ಅದನ್ನು ತೆಗೆದು ನೋಡಲಾಗಿ ಅದು ಘಾಟು ವಾಸನೆಯಿಂದ ಕೂಡಿದ್ದು ಅದು ಸೇಂದಿ ಎಂದು ನಮಗೆ ಕಂಡು ಬಂದಿರುತ್ತದೆ. ಸದರಿ ಚೀಲದಲ್ಲಿ 500 ಎಂಎಲನ 100 ಪ್ಲಾಸ್ಟಿಕ ಪೌಚಗಳು ಇದ್ದು ಅಂದಾಜು 50 ಲೀಟರ ಸೇಂದಿ ಇತ್ತು. ನಂತರ ಸದರಿ ಚೀಲದಿಂದ 1 ಲೀಟರನ 2 ಪ್ಲಾಸ್ಟಿಕ ಬಾಟಲಗಳಲ್ಲಿ ಸೆಂದಿಯನ್ನು ರಾಸಾಯನಿಕ ಪರಿಕ್ಷೆಗೆ ತೆಗೆದುಕೊಳ್ಳಲಾಯಿತು. ನಂತರ ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ 437 ಎಂದು ಅರಗಿನಿಂದ ಸೀಲ್ ಮಾಡಿ ಮಾದರಿ ಮುದ್ರೆ ನಮೂನೆ ಹಾಗೂ ಮಾದರಿ ಚೀಟಿ ತಯಾರಿಸಿ ಪಂಚರು ಹಾಗೂ ನಾವು ಸಹಿ ಮಾಡಿ ಅಂಟಿಸಲಾಯಿತು. ನಂತರ ಸದರಿ ಸ್ಥಳದಲ್ಲಿ ಸುಮಾರು ಜನರು ನೆರದಿದ್ದು, ಅವರಿಗೆ ಸದರಿ ಮನೆ ಮಾಲೀಕತ್ವ ಯಾರುದು ಎಂದು ವಿಚಾರಿಸಲಾಗಿ ಅವರು ಯಾರು ತಮ್ಮ ಹೆಸರು ಹೇಳದೇ ಓಡಿ ಹೋದ ವ್ಯಕ್ತಿ ಬಾಬು ತಂದೆ ಗಂಗೂ ಚವಾಣ ಎಂದು ಹೇಳಿದ ನಂತರ ನಾವು ಖಚಿತಪಡಿಸಿಕೊಂಡಿರುತ್ತೇವೆ. ನಾನು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಅವನೇ ಆರೋಪಿ ಎಂದು ಗುರುತಿಸುತ್ತೇನೆ. ಘಟನಾ ಸ್ಥಳದ ಚಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಆರೋಪಿಗೆ ಸೇರಿದ ಖಾಲಿ ಜಾಗ, ದಕ್ಷಿಣಕ್ಕೆ ಆರೋಪಿಗೆ ಸೇರಿದ ತಿಪ್ಪೆಗುಂಡಿ, ಉತ್ತರಕ್ಕೆ ಖುಲ್ಲಾ ಜಾಗೆ ಇರುತ್ತದೆ. ಸ್ಥಳದಲ್ಲಿ ಪಂಚನಾಮೆಯನ್ನು 3.00 ರಿಂದ 4.00 ರ ವರೆಗೆ ಮಾಡಿ ಪಂಚನಾಮೆ ಬರೆದು ಓದಿ ಹೇಳಿ ಕೇಳಿ ಪಂಚರು ಹಾಗೂ ನಾವು ಸಹಿ ಮಾಡಿರುತ್ತೇನೆ. ನಂತರ ಕಚೇರಿಗೆ ಬಂದು ಮು.ಮಾ.ಗಳನ್ನು

ಕಚೇರಿಗೆ ತಂದು ಆರೋಪಿಯ ವಿರುದ್ದ ಪ್ರ.ವ.ವ. ದಾಖಲಿಸಿ ಸರ್ಕಾರಿ ತರ್ಪೆ ಫಿರ್ಯಾದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ನಂತರ ಮುಂದಿನ ತನಿಖೆಗೆ ಚಾಸಾ-4 ರವರಿಗೆ ಕಡತವನ್ನು ಹಸ್ತಾಂತರಿಸಲಾಯಿತು.

ಸಾಕ್ಷಿಗೆ ಈಗ ಪಂಚನೆಮಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ. ತೋರಿಸಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಸರಕಾರಿ ತರ್ಪೆ ಪಿರ್ಯಾದಿಯನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಸರಕಾರಿ ತರ್ಪೆ ಪಿರ್ಯಾದಿಯನ್ನು ನಿಪಿ-5 ಎಂದು ಅದರಲ್ಲಿ ಇರುವ ಸಹಿಯನ್ನು ನಿಪಿ-5(ಎ) ಎಂದು ಗುರತಿಸಲಾಯಿತು. ಸಾಕ್ಷಿಗೆ ಈಗ ಶೋಧನಾ ಸಮುಚಿತ ಪತ್ರವನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಶೋಧನಾ ಸಮುಚಿತ ಆಧಾರವನ್ನು ನಿಪಿ-6 ಎಂದು ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಮಾದರಿ ಮುದ್ರೆಯ ನಮೂನೆಯನ್ನು ತೋರಿಸಿ ಅದರಲ್ಲಿ ಇರವ ಸಹಿಯನ್ನು ಮಾದರಿ ಮುದ್ರೆ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗಾಗಲೇ ಗುರುತಿಸಿದ ಮು.ಮಾ.ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾ. ಸವಾಲುಃ- ಆರೋಪಿ ಪರ ಬಿ.ಐ.ಎಸ್. ವಕೀಲರಿಂದಃ**

ನನಗೆ ದಿ.18.04.2020 ರಲ್ಲಿ ದೂರವಾಣಿ ಮೂಲಕ ಯಾರು ಕರೆ ಮಾಡಿದ್ದರು ಎಂದು ನೆನಪಿಲ್ಲ. ಸದರಿ ಕರೆಯು ಸುಮಾರು 1.00 ಗಂಟೆಗೆ ಬಂದಿತ್ತು. ಸದರಿ ಕರೆಯು ನನಗೆ ಬಂದಿತ್ತು. ಸದರಿ ವಿಷಯ ತಿಳಿದ 30 ನಿಮಿಷದ ಬಳಿಕ ನಾವು ಘಟನೌ ಸ್ಥಳಕ್ಕೆ ಹೊರಟಿರುತ್ತೇವೆ. ಸದರಿ ಸಮಯದಲ್ಲಿ ನಾನು ನಮ್ಮ ಸಿಬ್ಬಂದಿಯೊಂದಿಗೆ ಚರ್ಚೆ ಮಾಡಿರುತ್ತೇನೆ. ನನ್ನ ಜೊತೆಗೆ ಘಟನಾ ಸ್ಥಳಕ್ಕೆ ಬಂದ ವ್ಯಕ್ತಿಗಳ ಹೆಸರೆಂದರೆ ಮೈನೊದ್ದಿನ ಮತ್ತು ರಾಘವೇಂದ್ರ, ಪಂಚರಾದ ಬಸವರಾಜ ಮತ್ತು ಸಿದ್ರಾಮ ಮತ್ತು ವಾಹನ ಚಾಲಕ. ಘಟನಾ ಸ್ಥಳಕ್ಕೆ ನಮ್ಮ ಕಚೇರಿಯಿಂದ ಬಿಟ್ಟು 15-20 ನಿಮಿಷಗಳ ಒಳಗೆ ಹೋಗಿರುತ್ತೇವೆ. ಸದರಿ ಘಟನಾ ಸ್ಥಳಕ್ಕೆ ಇದಕ್ಕಿಂತ ಮುಂಚೆ ಭೇಟಿ ಮಾಡಿರುತ್ತೇನೆ. ಈ ಮುಂಚೆ ನನಗೆ ಸದರಿ ಜಾಗದಲ್ಲಿ ನಡೆದ ಘಟನೆಯ ಬಗ್ಗೆದೂರು ಬಂದ ಕಾರಣ ನಾನು ಭೇಟಿ ಮಾಡಿರುತ್ತೇನೆ. ನನಗೆ ದಿ.18.04.2020 ರಂದು ಯಾವುದೇ ಬಾತ್ಮಿ ಬಂದಿಲ್ಲ, ನಾನು ಘಟನಾ ಸ್ಥಳಕ್ಕೆ ಸಿಬ್ಬಂದಿ ಮತ್ತು ಪಂಚರೊಂದಿಗೆ ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇಂದು ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿಂದ ಒಬ್ಬ ವ್ಯಕ್ತಿ ಓಡಿ ಹೋಗಿದ್ದನು ನಾವು ಅಂದಾಜು 50 ಫೀಟ ದೂರದಿಂದ ನೋಡಿರುತ್ತೇವೆ. ಸಾಮಾನ್ಯವಾಗಿ ಒಬ್ಬ ಕುಂಟ ವ್ಯಕ್ತಿ 50 ಅಡಿ ದೂರದಿಂದ ಓಡಿ ಹೋದಾಗ ಒಬ್ಬ ಸಾಮಾನ್ಯ ಸಧೃಢ ವ್ಯಕ್ತಿಯು ಅವನನ್ನು ಒಡಿ ಹೋಗಿ ಹಿಡಿಯಬಹುದು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿ ವ್ಯಕ್ತಿಯು ಪೂರ್ತಿಯಾಗಿ ಕುಂಟುತ್ತಿರಲಿಲ್ಲ ಅವನು ಓಡಿ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದ ಶೋಧನೆಯನು ಅರ್ಧ ಗಂಟೆವರೆಗೆ ಮಾಡಿರುತ್ತೇನೆ. ಸದರಿ ಘಟನಾ ಸ್ಥಳದ ಮನೆಯ ಬಾಗಿಲು ಯಾವ ದಿಕ್ಕಿಗೆ ಇರುತ್ತದೆ ಎಂದು ಹೇಳಲು ನೆನಪಿರುವುದಿಲ್ಲ. ಸದರಿ ಮನೆಗೆ ಎಷ್ಟು ಕಿಟಕಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ನಂಬರನ್ನು ನಾನು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಸದರಿ ಮನೆಯ ಮಾಲೀಕರು ಯಾರು ಎಂದು ವಿಚಾರಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಮನೆಯ ಸಂಖ್ಯೆಯನ್ನು ತನಿಖಾಧಿಕಾರಿಗಳು ವಿಚಾರಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯಿಂದ ಯಾವುದೇ ಘಟನೆ ನಡೆದಿರುವುದಿಲ್ಲ, ಘಟನಾ ಸ್ಥಳದಿಂದ ಯಾವುದೇ ಮು.ಮಾ.ನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗದೇ ಕಚೇರಿಯಲ್ಲಿ ಕುಳಿತು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಠಾಣೆಯ ಅಂಕಿ ಸಂಖ್ಯೆ ಹೆಚ್ಚಿಸಲು ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.ಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಇದ್ದ ಜನರು ಅವರ ಹೆಸರು ಹೇಳಲು ನರಾಕರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಘಟನಾ ಸ್ಥಳದ ಚಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಆರೋಪಿಗೆ ಸೇರಿದ ಖಾಲಿ ಜಾಗ, ದಕ್ಷಿಣಕ್ಕೆ ಆರೋಪಿಗೆ ಸೇರಿದ ತಿಪ್ಪೆಗುಂಡಿ, ಉತ್ತರಕ್ಕೆ ಖುಲ್ಲಾ ಜಾಗೆ ಇರುತ್ತದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸರಿಯಲ್ಲ. ಸದರಿ ಮನೆಯ ಚಕುಬಂದಿ ಎಂದರೆ ಪೂರ್ವಕ್ಕೆ ಮನಗಳು, ಪಶ್ಚಿಮಕ್ಕೆ ಬೇರೆಯವರ ಮನೆಗಳು, ದಕ್ಷಿಣಕ್ಕೆ ಆರೋಪಿಯ ಸಂಬಂಧಿಕರ ಮನೆ, ಉತ್ತರಕ್ಕೆ ಮನೆಗಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಚಿಕ್ಕಂದಿನಿಂದ ಬಲಗಾಲಿಗೆ ಪೋಲಿಯೋ ಆಗಿದ್ದು ಅವನಿಗೆ ಸರಿಯಾಗಿ ನಡೆಯಲು ಬರುವುದಿಲ್ಲ ಮತ್ತು ಆತನ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ